MYSORE LEGISLATIVE COUNCIL

Saturday, 9th March 1968

The House met in the Council Chamber, Vidhana Soudha, Bangalore, at Nine of the Clock.

[MR. CHAIRMAN (SRI S. C. EDKE) in the Chair.]

STARRED QUESTIONS

(to which oral answers were given)

Conducting Lok Sabha and Rajya Sabha at Bangalore

53. Sri M. V. VENKATAPPA (Graduates' Constituency).—

Will the Chief Minister be pleased to state :—

(*a*) whether State Government has submitted all the details asked by the Central Government to conduct the Lok Sabha and Rajya Sabha Session in summer every year at Bangalore ;

(*b*) whether they would persuade the Central Government to conduct the Lok Sābha and Rajya Sabha Session at Bangalore at least from the year 1969 ?

A.—Sri S. NIJALINGAPPA (Chief Minister).—

(*a*) Some details have been furnished to Government of India.

(*b*) Necessary effort will be made.

ಶ್ರೀ ಎಂ. ವಿ. ವೆಂಕಟಪ್ಪ.—ಲೋಕಸಭೆ ಮತ್ತು ರಾಜ್ಯಸಭೆ ಅಧಿವೇಶನಗಳನ್ನು ಇಲ್ಲಿ ನಡೆಸಬೇಕಾಗಿದ್ದರೆ ರಾಜ್ಯ ಸರ್ಕಾರದವರನ್ನು ಕೇಂದ್ರ ಸರ್ಕಾರದವರು ಏನೇನು ಅನುಕೂಲಗಳು ಬೇಕಾಗಿವೆಯೆಂದು ಕೇಳಿದ್ದಾರೆ ? ಅದಕ್ಕೆ ನಮ್ಮ ಸರ್ಕಾರದವರು ಕೊಟ್ಟ ಉತ್ತರವೇನು ?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮ ಸರ್ಕಾರದವರು ಅದಷ್ಟು ಅನುಕೂಲಗಳನ್ನು ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಅದರೆ ಅವರು ಬಹಳವಾಗಿ ಕೇಳುತ್ತಾರೆ. ನೂಮಾರು ಒಂದು ಸಾವಿರ ಜನಗಳಷ್ಟು ಸಿಬ್ಬಂದಿಗೆ ಅನುಕೂಲಮಾಡಿಕೊಡಬೇಕಾಗಿದೆ. ಸೆಕ್ಯೂರಿಟಿ ಮತ್ತು ಪ್ರಿಂಟಿಂಗ್ ಸಿದ್ಧತೆಗಳನ್ನು ಮಾಡಬೇಕಾಗಿದೆ. ಎರಡು ಸಭಾಂಗಣಗಳನ್ನು ಸರಿಮಾಡಿಕೊಡಬೇಕು. ನಮಗೆ ಸಾಧ್ಯವಾದುದೆಲ್ಲವನ್ನೂ ಮಾಡಿಕೊಡಬೇಕು. ಸಾಲದಕ್ಕೆ ನಮ್ಮಿಂದ ಒಬ್ಬ ಅಧಿಕಾರಿಯನ್ನೂ ಸಹ ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಅವರು ಕೇಳಿಕೊಂಡು ಬಂದು ನನ್ನಲ್ಲಿ ಮಾತನಾಡುತ್ತಾರೆ. ಈ ಸರ್ಕಾರದ ಪರವಾಗಿ ಏನೇನು ಕೇಳುತ್ತಾರೋ ಅದಷ್ಟೂ ಸಾಧ್ಯವಾಗುವಷ್ಟು ಮಾಡಿ ಕೊಡುತ್ತೇವೆ. ದುಡ್ಡು ಸ್ವಲ್ಪ ಜಾಸ್ತಿ ಖರ್ಚುಮಾಡಬೇಕಾಗಿದೆ. ಅವರೂ ಸಹ ಇದಕ್ಕೆ ಸಹಾಯ ಮಾಡಿಯಾರು ಎಂಬುದಾಗಿ ನಾನು ನಿರೀಕ್ಷಣೆಮಾಡುತ್ತೇನೆ

ಶ್ರೀ ಎಂ. ಎ. ವೆಂಕಟಪ್ಪ.—ಇಲ್ಲಿ ರಾಜ್ಯಸಭೆಯನ್ನು ನಡೆಸುವುದಕ್ಕೆ ಆಗುತ್ತದೆಯೇ? ಒಂದುವೇಳೆ ಆ ರೀತಿ ಮಾಡುವುದಕ್ಕೆ ಆಗದಿದ್ದರೆ ಎರಡು ಪಕ್ಷಗಳ ಲೀಡರುಗಳನ್ನು ಕೂಡಿಸಿ ಏರ್ಪಾಡುಮಾಡುವುದಕ್ಕಾಗುತ್ತದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಒಂದು ಸೂಚನೆ. ಅವರು ಇಲ್ಲಿಗೆ ಬಂದು ನನ್ನನ್ನು ನೋಡುತ್ತಾರೆ. ಅದನ್ನು ಆಮೇಲೆ ವಿಚಾರಮಾಡಿ ನೋಡಬೇಕು.

ಶ್ರೀ ಎಂ. ಎ. ವೆಂಕಟಪ್ಪ.—ಲೋಕಸಭೆಗೆ ಅಸೆಂಬ್ಲಿ ಹಾರ್ ಸಾಕಾಗುತ್ತದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಸಾಕಾಗಬಹುದು.

ಶ್ರೀ ಎಂ. ಎ. ವೆಂಕಟಪ್ಪ.—ಏನಾದರೂ ಬದಲಾವಣೆಗಳನ್ನು ಮಾಡಬೇಕಾಗುತ್ತದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಹೆಚ್ಚುಕಡಿಮೆ ಸೀಟುಗಳನ್ನು ಸ್ವಲ್ಪ ಹೆಚ್ಚಿರಬೇಕಾಗುತ್ತದೆ. ಇಂಗ್ಲೆಂಡಿನಲ್ಲಿ 500—600 ಸದಸ್ಯರುಗಳು ಹೌಸ್ ಆಫ್ ಕಾಮನ್ಸ್‌ನಲ್ಲಿದ್ದಾರೆ. ಅಲ್ಲಿ ಕುಳಿತುಕೊಳ್ಳುವುದಕ್ಕೆ ಕೇವಲ 250 ಸುಮಾರು ಸದಸ್ಯರಿಗೆ ಆಗುವಷ್ಟು ಅವಕಾಶವಿದ್ದರೂ ಅವರೆಲ್ಲರೂ ಹೇಗೋ ಅಡ್ಜಸ್ಟ್ ಮಾಡಿಕೊಂಡು ಕುಳಿತುಕೊಳ್ಳುತ್ತಾರೆ. ಅದ್ದರಿಂದ ಇಲ್ಲಿಯೂ ಅಷ್ಟೇ. ಏನಾದರೂ ಏರ್ಪಾಡು ಮಾಡುತ್ತೇವೆ. ಅವರು ಇಲ್ಲಿ ಬಂದು ಅಧಿವೇಶನವನ್ನು ನಡೆಸುತ್ತೇವೆಂದು ಹೇಳಿದರೆ ಅವರಿಗೆ ಏನೇನು ಅನುಕೂಲಗಳನ್ನು ಮಾಡಿಕೊಡಬೇಕೋ ಎಲ್ಲವನ್ನೂ ಮಾಡುತ್ತೇವೆ.

ಶ್ರೀ ಕೆ. ಎನ್. ಚನ್ನಪ್ಪ.—ಲೋಕಸಭೆ ಮತ್ತು ರಾಜ್ಯಸಭೆಯ ಅಧಿವೇಶನಗಳನ್ನು ನಡೆಸುವುದರಿಂದ ಏನಾದರೂ ನಮ್ಮ ಸರ್ಕಾರಕ್ಕೆ ಆದಾಯ ಇರುತ್ತದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಆದಾಯವೇನೂ ಕಾಣಲಿಲ್ಲ. ಸ್ವಲ್ಪಮಟ್ಟಿಗೆ ಅನಾನುಕೂಲವಾದರೂ ದೇಶದ ಹಿತದೃಷ್ಟಿಯಿಂದ ಉತ್ತರದವರು ಮತ್ತು ದಕ್ಷಿಣದವರು ಒಟ್ಟಿಗೆ ಆಗಬೇಕೆಂಬ ದೃಷ್ಟಿಯಿಂದ ಇದನ್ನು ಆಲೋಚನೆ ಮಾಡುತ್ತಿದ್ದಾರೆ. ಇದರಿಂದ ಹೆಚ್ಚಿಗೆ ಬಸ್ಸಿನವರಿಗೆ, ಕಾರಿನವರಿಗೆ ಮತ್ತು ಹೋಟೆಲ್‌ನವರಿಗೆ ಅನುಕೂಲವಾಗುತ್ತದೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಈ ರೀತಿಯಾಗಿ ದಕ್ಷಿಣ ಭಾರತದಲ್ಲಿ ಪಾರ್ಲಮೆಂಟ್ ಅಧಿವೇಶನವನ್ನು ನಡೆಸುವುದರಿಂದ ಉತ್ತರ ಮತ್ತು ದಕ್ಷಿಣದವರ ಐಕ್ಯತೆಗೆ ಸಾಧಕವಾಗುವುದಿಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಮೊದಲೇ ಅದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಎಂ. ಎ. ವೆಂಕಟಪ್ಪ.—ಲೋಕಸಭೆ ಮತ್ತು ರಾಜ್ಯಸಭೆ ಅಧಿವೇಶನಗಳನ್ನು ಇಲ್ಲ ಬೇಸಿಗೆಯಲ್ಲಿ ನಡೆಸುತ್ತಾರೆಯೋ, ಚಳಿಗಾಲದಲ್ಲಿ ನಡೆಸುತ್ತಾರೆಯೋ? ಆ ರೀತಿಯಾಗಿ ಬೇಸಿಗೆಯಲ್ಲಿ ಆ ಅಧಿವೇಶನಗಳನ್ನು ನಡೆಸಿದರೆ ನಮ್ಮ ಬಜೆಟ್ ಸೆಷನ್ನನ್ನು ಟೌನ್‌ಹಾರ್‌ನಲ್ಲಿ ನಡೆಸುವುದಕಾಗುವುದಿಲ್ಲವೇ? ಅದೇ ಸಮಯದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಅಧಿವೇಶನಗಳನ್ನು ನಡೆಸುವುದಕ್ಕಾಗುತ್ತದೆಯೇ? ಒಂದೇ ಸಮಯದಲ್ಲಿ ನಡೆಯಿಸುವುದಕ್ಕೆ ಕಷ್ಟವಾಗುವುದಿಲ್ಲವೆ? ಬಹುಶಃ ಟೌನ್ ಹಾರ್‌ನಲ್ಲಾದರೂ ನಮ್ಮ ಅಧಿವೇಶನಗಳನ್ನು ನಡೆಸುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಪರಿವಾಡಿಕೊಳ್ಳಬಹುದು. ಅದಕ್ಕೇನೂ ತೊಂದರೆ ಯಾಗುವುದಿಲ್ಲ.

Scheme for educating the Public on the need for Prohibition

54. **Sri M. P. L. SASTRY** (Nominated).—

Will the Minister for Finance, Planning, Commerce and Industries be pleased to state :—

(*a*) whether they have any scheme for educating the public on the need for prohibition ;

(*b*) the amount earmarked for the purpose, if any ?